ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	330
ಸದಸ್ಯರ ಹೆಸರು	ಶ್ರೀ.ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)
ವಿಷಯ	ಅಂಗವಿಕಲರ ಮಾಸಾಶನದ ಬಗ್ಗೆ.
ಉತ್ತರಿಸಬೇಕಾದ ದಿನಾಂಕ	6.03.2020
ಉತ್ತರಿಸುವ ಸಚಿವರು	ಕಂದಾಯ ಸಚಿವರು.
ಪ್ರಶ್ನೆ	**ಉತ್ತರ**
ಅ) ರಾಜ್ಯದಲ್ಲಿ ಅಂಗವಿಕಲರ ಮಾಸಾಶನ ಪಡೆಯುತ್ತಿರುವ ಫಲಾನುಭವಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಒಟ್ಟು 9.40.065 ಫಲಾನುಭವಿಗಳು ಅಂಗವಿಕಲರ ಮಾಸಾಶನ ಸೌಲಭ್ಯ ಪಡೆಯುತ್ತಿದ್ದಾರೆ.
ಆ) ಪ್ರಸ್ತುತ ಸರ್ಕಾರ ನೀಡುತ್ತಿರುವ ಅಂಗವಿಕಲರ ಮಾಸಾಶನದ ಪ್ರಮಾಣ ಎಷ್ಟು;	ಶೇ.40 ರಿಂದ ಶೇ.74 ಅಂಗವಿಕಲತೆ ಹೊಂದಿರುವ ಫಲಾನುಭವಿಗಳಿಗೆ ರೂ.600/- ಹಾಗೂ ಶೇ.75ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಫಲಾನುಭವಿಗಳಿಗೆ ರೂ.1400/-ಗಳ ಮಾಸಾಶನವನ್ನು ನೀಡಲಾಗುತ್ತಿದೆ.
ಇ) ಸೆಪ್ಟೆಂಬರ್ 2019 ರ ಮಾಹೆಯಿಂದ ಇಲ್ಲಿಯವರೆಗೆ ಅಂಗವಿಕಲರ ಮಾಸಾಶನವನ್ನು ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ) ಬಂದಿದ್ದಲ್ಲಿ, ಸ್ಥಗಿತಗೊಳಿಸಲು ಕಾರಣವೇನು; ಉ) ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	ಬ್ಯಾಂಕ್ ಖಾತೆ ಹಾಗೂ ಇ-ಮನಿಯಾರ್ಡರ್‌ಗಳ ಮೂಲಕ ಮಾಶಾಸನ ಬಿಡುಗಡೆಗೊಳಿಸಲಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಫಲಾನುಭವಿಗಳು ಬ್ಯಾಂಕ್ ಖಾತೆ ವಿವರ/ IFSC CODE / PINCODE ಮಾಹಿತಿಯನ್ನು ನಿಖರವಾಗಿ ನೀಡದೆ ಇರುವ ಕಾರಣ NO SUCH ACCOUNT/ INVALID BANK DETAILS ಮತ್ತು INVALID ADDRESS ಕಾರಣದಿಂದ ಪಿಂಚಣಿ ಪಾವತಿಯಾಗದಿದ್ದಲ್ಲಿ ಈ ಬಗ್ಗೆ ಪರಿಶೀಲಿಸಿ ಬ್ಯಾಂಕ್ ಖಾತೆ ವಿವರ ಹಾಗೂ ವಿಳಾಸ ನ್ಯೂನತೆಯನ್ನು ಸರಿಪಡಿಸಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ. ಫಲಾನುಭವಿಗಳು ಅಗತ್ಯ ಮಾಹಿತಿ ನೀಡಿದಲ್ಲಿ ನ್ಯೂನತೆಯನ್ನು ಸರಿಪಡಿಸಿ ತಂತ್ರಾಂಶದಲ್ಲಿ ತಹಸೀಲ್ದಾರರು ಅನುಮೋದನೆ ನೀಡಿದ ನಂತರ ಸರಿಪಡಿಸಲಾದ ಮಾಹಿತಿಯನ್ನು ಖಜಾನೆಗೆ ಅನುಕಲನೆ ಮೂಲಕ ವರ್ಗಾಯಿಸಿ ಪಿಂಚಣಿ ಪಾವತಿಗೆ ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಡಿಎಸ್‌ಎಸ್‌ಪಿ/ಎಲ್‌ಎಎಲ್‌ಸಿ/13/2020

(ಆರ್.ಅಶೋಕ್)
ಕಂದಾಯ ಸಚಿವರು